ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್‌ಕೇಸ್ ನಂಬರ್ : 214/2021**

**ಫ್ರಾಸಾ- 8 ಚಾಸಾ- 11**

ಸಾಕ್ಷಿದಾರರ ಹೆಸರುಃ : ರೂಪೇಶ್ ಎಸ್,ಎನ್.

ತಂದೆಯ ಹೆಸರುಃ : ನಾರಾಯಣಸ್ವಾಮಿ

ವಯಸ್ಸುಃ : 41 ವರ್ಷ

ಉದ್ಯೋಗಃ : ಸಿಪಿಸಿ-35

ವಾಸ : ಹಾಸನ

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 02-07-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನಾನು ಜೂನ್-2018 ರಿಂದ ಜೂನ್-2023ರವರೆಗೆ ಶಾಂತಿಗ್ರಾಮ ಪಿ.ಎಸ್. ನಲ್ಲಿ ಸಿಪಿಸಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 06.01.2019ರಂದು ಹಾಸನ ಗ್ರಾಮಾಂತರ ವೃತ್ತ ನಿರೀಕ್ಷಕರು ಚಾಸಾ-15ರವರು ಚಾಸಾ-12 ಮತ್ತು 14ರವರನ್ನು ಈ ಪ್ರಕರಣದ ಆರೋಪಿತರ ಮತ್ತು ಮಾಲು ಪತ್ತೆಗಾಗಿ ನೇಮಕ ಮಾಡಿದ್ದರು. ಅದರಂತೆ ದಿಃ 07.01.2019ರಂದು ಎನ್.ಹೆಚ್.75ರ ಮಡೆನೂರು ಗ್ರಾಮದ ಹತ್ತಿರ ಬೆಳಗ್ಗೆ 6.00ಗಂಟೆಗೆ ವಾಹನ ತಪಾಸಣೆ ಮಾಡುತ್ತಿದ್ದಾಗ ಹಾಸನ ಕಡೆಯಿಂದ ಬಂದಂತಹ ಕೆಎ 02 ಜೆವಿ 1706ರ ಬಜಾಜ್ ಅವೆಂಜರ್ ಬೈಕನ್ನು ತಡೆ ನಿಲ್ಲಿಸಿ ವಿಚಾರಿಸಿದಾಗ ಸವಾರ ತಡವರಿಸುತ್ತ ತನ್ನ ಹೆಸರು ಒಮ್ಮೆ ಸಂತೋಷ ಎಂದು ಮತ್ತೊಮ್ಮೆ ದರ್ಶನ ಅಲಿಯಾಸ್ ಶುಕ್ರ ಎಂದು ತಂದೆ ಹೆಸರು ಯತೀಶ್ ವಾಸ ಚನ್ನಪಟ್ಟಣ, 18ವರ್ಷ ಎಂದು ತಿಳಿಸಿದನು. ಚಾಸಾ-14ರವರು ಆತನ ಬಳಿ ಆ ವಾಹನದ ದಾಖಲಾತಿಯನ್ನು ಕೇಳಿದಾಗ ಆತ ಸಮಂಜಸವಾದ ಉತ್ತರವನ್ನು ನೀಡಲಿಲ್ಲ ಆದ್ದರಿಂದ ಆತನ ಮೇಲೆ ಅನುಮಾನಕೊಂಡು ಬೈಕ್ ಸಮೇತ ಆತನನ್ನು ವಶಕ್ಕೆ ಪಡೆದು ಕರೆತಂದು ಚಾಸಾ-15ರವರ ಮುಂದೆ

ಹಾಜರುಪಡಿಸಿದೆವು. ಈ ಬಗ್ಗೆ ವರದಿಯನ್ನು ಚಾಸಾ-14ರವರು ನೀಡಿರುತ್ತಾರೆ. ಸದರಿ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತಾರೆ. (ಆರೋಪಿಯು ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ವಕೀಲರು ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಸಂದರ್ಭದಲ್ಲಿ ವಕೀಲರು ಗೈರು ಹಾಜರಿರುತ್ತಾರೆ. ಆದ್ದರಿಂದ ಆರೋಪಿತರ ಗುರುತುವಿಕೆಯ ಬಗ್ಗೆ ತಕರಾರು ಇಲ್ಲವೆಂದು ಪರಿಗಣಿಸಲಾಗಿದೆ) ಆ ದಿವಸ ವಶಕ್ಕೆ ಪಡೆದ ಮೋಟಾರು ಬೈಕನ್ನು ನೋಡಿದರೆ ಗುರುತಿಸುತ್ತೇನೆ. ಅದು ನಿಪಿ.9ರ ಪೋಟೋದಲ್ಲಿ ಇದೆ.

3. ನಂತರ ಚಾಸಾ-15ರವರು ಸದರಿ ಆರೋಪಿತರನ್ನು ವಿಚಾರಿಸಿದಾಗ ಆತನು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ದೋಚಿರುವ ಚಿನ್ನಾಭರಣಗಳನ್ನು ಹಾಸನ ಚನ್ನಪಟ್ಟಣದ 5ನೇ ಕ್ರಾಸಿನಲ್ಲಿ ಇಟ್ಟಿರುವುದಾಗಿ ತಿಳಿಸಿದ ಮೇರೆಗೆ ಚಾಸಾ-15ರವರು ಆ ಚಿನ್ನವನ್ನು ವಶಪಡಿಸಿಕೊಳ್ಳುವ ಸಲುವಾಗಿ ಅದನ್ನು ತೂಕ ಮಾಡಲು ಒರ್ವ ಅಕ್ಕಸಾಲಿಗ ಮತ್ತು ತೂಕಮಾಪನವನ್ನು ಆರೋಪಿ ದರ್ಶನ ಮನೆಯ ಬಳಿ ಕರೆದುಕೊಂಡು ಬರುವಂತೆ ಸೂಚಿಸಿದರು.ಅದರಂತೆ ನಾನು ಶಾಂತಿಗ್ರಾಮಕ್ಕೆ ಹೋಗಿ ಅಲ್ಲಿ ಆನಂದ ಜ್ಯುವೆಲರಿ ಅಂಗಡಿಯ ಮಾಲೀಕರಾದ ಪ್ರಕಾಶ್ ಚಂದ್ ಎಂಬುವವರನ್ನು ಕರೆದುಕೊಂಡು ಬಂದು ಆರೋಪಿಯ ಮನೆಯ ಬಳಿ ಹೋಗಿ ಚಾಸಾ-14ರವರ ಮುಂದೆ ವರದಿ ಮಾಡಿರುತ್ತೇನೆ. ಈ ಬಗ್ಗೆ ಅದೇ ದಿನಾಂಕದಂದು ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

(ಆರೋಪಿತರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲಿಗೆ ಕಾಲವಕಾಶ ನೀಡಲು ಸಕಾರಣಗಳು ಕಂಡುಬರದೇ ಇದ್ದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**